ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—

ಅ) ಸುತ್ತೋಲೆ ಸಂಖ್ಯೆ. ಆರ್ ಡಿ ಪಿ ೭೦ ಬಿ ಎ ಸಿ ೮೮, ದಿನಾಂಕ ೮-೬-೧೯೮೮ರ ಅನ್ವಯ ಬಂಧದಲ್ಲಿ ಕೊಡಲಾಗಿದೆ.

ಆ) ಸದರಿ ಆಜ್ಞೆಯಿಂದ ಮಂಡಲ ಪಂಚಾಯತಿಗೆ ಅನಂಕೂಲವಾಗಿರುವುದರಿಂದ ಅದನ್ನು ಹಿಂತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಶ್ವ ಆಹಾರ ಯೋಜನೆ

೨೮೫. ಶ್ರೀ ಆರ್. ಎಂ. ಪಾಟೀಲ (ಆರಬಾವಿ),—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಶ್ವ ಆಹಾರ ಯೋಜನೆಯಲ್ಲಿ ಗೋಕಾಕ್ ತಾಲ್ಲೂಕ ಕ್ಷೇತ್ರವನ್ನು ಆಳವಡಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಯಾವ ಯಾವ ಯೋಜನೆಗಳನ್ನು ಆಳವಡಿಸಲಾಗಿದೆ ?

ಇ) ಈಗಾಗಲೇ ಪ್ರಾರಂಭಿಸಿರುವ ಕೆಲಸಗಳು ಯಾವುವು ?

ಈ) ಈ ಯೋಜನೆ ಎಷ್ಟು ವರ್ಷ ಜಾರಿಯಲ್ಲಿರುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಆಳವಡಿಸಲಾಗಿದೆ.

ಆ) ಗೋಕಾಕ್ ತಾಲ್ಲೂಕಿನ ಕ್ಷೇತ್ರದಲ್ಲಿ ಈ ಕೆಳಗಿನ ಯೋಜನೆಗಳು ವಿಶ್ವ ಆಹಾರ ಯೋಜನೆ ೨೩೦೩ ವಿಸ್ತರಣೆ (ಪರಿಷ್ಕೃತ-೧೯೮೮) ಇದರಲ್ಲಿ ಆಳವಡಿಸಲಾಗಿದೆ.

ಅ ರಸ್ತೆ ಸಂಪರ್ಕ ಮತ್ತು ಪೇಟೆ ಸೌಕರ್ಯ

೧) ಲೋಳಸೂರ ವಡ್ಡರ ಹಟ್ಟಿ ರಸ್ತೆ ಸುಧಾರಣೆ

೨) ಖಾನಾಪೂರ ನಂದಗಾವ ರಸ್ತೆ ಸುಧಾರಣೆ

ಬ ಸಾಮಾಜಿಕ ಸೌಲಭ್ಯಗಳು.

೧ ಕೊಳವಿಯಲ್ಲಿ ಆಸ್ಪತ್ರೆಗೆ ಸಂದಾರ ಚಿಕಿತ್ಸಾ ವಾಹನವನ್ನು ಒದಗಿಸುವುದು.

೨ ತವಗದಲ್ಲಿ ಬಾಲವಾಡಿ ಕಟ್ಟಿಸುವುದು,

೩ ಕೊಳವಿಯಲ್ಲಿ ಬಾಲವಾಡಿ ಕಟ್ಟಿಸುವುದು.

೪ ಚಿಕ್ಕ ನಂದಿಯಲ್ಲಿ ಬಾಲವಾಡಿ ಕಟ್ಟಿಸುವುದು

೫ ಬೆಣಚಿನ ವಂಠಡಿಯಲ್ಲಿ ಪ್ರಾಥಮಿಕ ಶಾಲಾ ಕಟ್ಟಡ

೬ ಕೌಜಲಗಿಯಲ್ಲಿ—ಸದರ—

೭ ಮಾಮದಾಪೂರದಲ್ಲಿ—ಸದರ—

ಕ ಉತ್ಪನೆ ಮತ್ತು ಉದ್ಯೋಗ ಸೃಷ್ಟಿ

೧ ಕಲ್ಲು ಕುಟಿಗರಿಗೆ ಕಲ್ಲು ಕುಟಿಗತನಕ್ಕೆ ಬೇಕಾದ ಉಪಕರಣಗಳನ್ನು ಒದಗಿಸುವುದು.

೨ ಬಡಗಿಗಳಿಗೆ ಉಪಕರಣಗಳನ್ನು ಒದಗಿಸುವುದು.

೩ ಕಮ್ಮಾರರಿಗೆ ಉಪಕರಣಗಳನ್ನು ಒದಗಿಸುವುದು.

೪ ಚರ್ಮಕಾರರಿಗೆ ಚರ್ಮದ ಉಪಕರಣಗಳನ್ನು ಒದಗಿಸುವುದು,

೫ ಇಂಡಸ್ಟ್ರೀಯಲ್ ಶೆಡ್ (ಮೂಡಲಗಿಯಲ್ಲಿ)

೫) ಈಗಾಗಲೇ ಪ್ರಾರಂಭಿಸಿರುವ ಕೆಲಸಗಳ ವಿವರವು. ಈ ಕೆಳಗಿನಂತಿದೆ.

ಅ ರಸ್ತೆ ಸಂಪರ್ಕ ಮತ್ತು ಪೇಟೆ ಸೌಕರ್ಯ

೧) ಲೋಳಸೂರ ವಡ್ಡರಹಟ್ಟಿ ರಸ್ತೆ ಸುಧಾರಣೆ

ಬ ಸಾಮಾಜಿಕ ಸೌಲಭ್ಯಗಳು

೧) ಕೊಳವಿಯಲ್ಲಿಯ ಬಾಲವಾಡಿ ಕಟ್ಟಡ

೨) ಬಿಣಚನ ಮರಡಿಯಲ್ಲಿಯ ಪ್ರಾಥಮಿಕ ಶಾಲಾ ಕಟ್ಟಡ.

೩) ಕೌಜಲಗಿಯ ಪ್ರಾಥಮಿಕ ಶಾಲಾ ಕಟ್ಟಡ,

ಕ ಉತ್ಪನೆ ಮತ್ತು ಉದ್ಯೋಗ ಸೃಷ್ಟಿ

ಈ ಕೆಲಸಗಳಿಗೆ ಫಂಕ್ಷನಲ್ ಮ್ಯಾನೇಜರ್, ಜಿಲ್ಲಾ ಪರಿಷತ್ ವಿಭಾಗ (ಖಾ. ಗ್ರಾ) ಬೆಳಗಾವಿ ಅವರ ಕಾರ್ಯಾನ್ವಯಾಧಿಕಾರಿಗಳಾಗಿದ್ದಾರೆ, ಈ ಬಗ್ಗೆ ಜಿಲ್ಲೆಗೆ ಒಟ್ಟು ೧೪.೩೩ ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಕಾರ್ಯವು ಪ್ರಗತಿಯಲ್ಲಿದೆ.

ಈ) ಈ ಯೋಜನೆ ೧೯೮೬-೮೮ನೇ ಸಾಲಿನಿಂದ ಆರಂಭಿಸಲ್ಪಟ್ಟು ದಿನಾಂಕ ೩೧-೩-೧೯೯೧ ರವರೆಗೆ ಜಾರಿಯಲ್ಲಿರುವುದು.

ಜವಾಹರಲಾಲ ಬಾಲಭವನದ ವಿಹಾರ ದೋಣಿಯನ್ನು ದುರಸ್ಥಿ ಕಾರ್ಯ ಮಾಡುವ ಬಗ್ಗೆ

೬೮. ಶ್ರೀಮತಿ ವಿನೋರವಾ ಪಂಢ್ವರಾಜ್ (ಉಡುಪಿ).—ಮಾನ್ಯ ಸಮಾಜ ಕಲ್ಯಾಣ ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜವಾಹರ ಬಾಲಭವನದ ವಿಹಾರ ದೋಣಿಯನ್ನು ೮ ವರ್ಷಗಳಿಂದಲೂ ದುರಸ್ಥಿ ಕಾರ್ಯ ನಡೆಸದೇ ಇರುವುದು ಹಾಗೂ ಸೆಂಟ್ ಮೇರಿಸ್ ದ್ವೀಪವನ್ನು ಸಂದರ್ಶಿಸಲು ಇಚ್ಛೆ ಪಡುವ ಪ್ರವಾಸಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗೂ ಪ್ರವಾಸಿಗರ ಹಿತ ದೃಷ್ಟಿಯಿಂದ ಈ ದೋಣಿಯನ್ನು ದುರಸ್ತಿ ಕಾರ್ಯ ಮಾಡಲಾಗುವುದೇ ಅಥವಾ ಹೊಸದಾಗಿ ಇನ್ನೊಂದು ದೋಣಿಯನ್ನು ಖರೀದಿಸಲು ಕ್ರಮ ತೆಗೆದುಕೊಳ್ಳಲಾಗುವುದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ. (ಸಮಾಜ ಕಲ್ಯಾಣ ಯುವಜನಾ ಸೇವಾ ಮತ್ತು ಕ್ರೀಡಾ ಸಚಿವರು).—

ಅ) ಹೌದು. ದೋಣಿ ನಿರ್ವಾಣ ವೆಚ್ಚ ಹೆಚ್ಚು ಇಲ್ಲದಿರುವುದೇ ವಿಳಂಬಕ್ಕೆ ಕಾರಣ. ಬಂದರು ಪ್ರಾಧಿಕಾರದೊಡನೆ ಒಪ್ಪಂದದ ಮೇರೆ ನಿರ್ವಾಣ ಮತ್ತು ಹೆಚ್ಚಿನ ವ್ಯವಸ್ಥೆ ಮಾಡಲಾಗುತ್ತದೆ.

ಆ) ದೋಣಿಯ ದುರಸ್ತಿ ಕಾರ್ಯ ಮಾಲ್ಪೆಯಲ್ಲಿ ನಡೆಯುತ್ತಿದ್ದು ಸದ್ಯದಲ್ಲೇ ಚಾಲನೆಗೆ ಸಿದ್ಧವಾಗುವ ನಿರೀಕ್ಷೆಯಿದೆ, ಜವಾಹರ ವಿಹಾರ ದೋಣಿಯನ್ನು ಮಕ್ಕಳು ಹಾಗೂ ಮಕ್ಕಳ ಜೊತೆಯಲ್ಲಿ ಬರುವ ವಯಸ್ಕರಿಗಾಗಿ ಉಡುಪಿ ತಾಲ್ಲೂಕು ಬಾಲ ಭವನ ನಡೆಸುತ್ತಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಶಿಕಾರಿಪುರ ತಾಲ್ಲೂಕಿನ ಅಂಬಳಿಗೊಳದಲ್ಲಿ ದಲಿತರ ಮೇಲೆ ಹಲ್ಲೆಯಾಗಿದೆ.....

(ಮಾನ್ಯ ಸದಸ್ಯರಾದ ಶ್ರೀ ವೇದಾಂತ ಹೆಬ್ಬಾಗೆ ಮತ್ತು ಇನ್ನೂ ಕೆಲವು ಸದಸ್ಯರು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಶ್ರೀ ಆರ್. ರಾಮಯ್ಯ.—ನನ್ನ ಪ್ರಶ್ನೆ ಬಾಕಿ ಉಳಿದಿದೆ.

(ಗೊಂದಲ)

ಅಧ್ಯಕ್ಷರು.—ಪ್ರಶ್ನೆ ಕೇಳಲು ನಿಮ್ಮನ್ನು ಕರೆದಾಗ ನೀವು ಗೈರುಹಾಜರಿದ್ದೀರಿ. ಆದ್ದರಿಂದ ನಿಮಗೆ ಪ್ರಶ್ನೆ ಕೇಳಲು ಈಗ ಅವಕಾಶ ಇಲ್ಲ.